# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 10.05.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಯಾದ ಸಂದರ್ಭದಲ್ಲಿ ಈ ಹಿಂದೆ ಇದ್ದ 3 ವಲಯಗಳ ಜೊತೆಗೆ ಹೆಚ್ಚುವರಿಯಾಗಿ 5 ವಲಯಗಳು ಸೇರ್ಪಡೆಯಾಗಿದ್ದು, ಒಟ್ಟು 8 ವಲಯಗಳಿಗೆ ಆಡಳಿತಾತ್ಮಕ ಮತ್ತು ಹಣಕಾಸಿನ ಅಧಿಕಾರವನ್ನು ಈಗಾಗಲೇ ಆಯಾ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಪ್ರತ್ಯಾಯೋಜನೆ ಮಾಡಲಾಗಿರುತ್ತದೆ. ಹೀಗಿದ್ದೂ ಸಹ ಕೇಂದ್ರ ಕಛೇರಿಯ ಕಾನೂನು ವಿಭಾಗದಲ್ಲಿ ಪಾಲಿಕೆಯ ಎಲ್ಲಾ 8 ವಲಯಗಳ ವ್ಯಾಪ್ತಿಗೆ ಬರುವ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ, ಎಲ್ಲಾ ಕಾನೂನು ವ್ಯವಹರಣೆಗಳನ್ನು ಕೇಂದ್ರ ಕಛೇರಿಯಲ್ಲಿ ನಿರ್ವಹಿಸುತ್ತಿದ್ದು, ಹೆಚ್ಚಿನ ಕಾರ್ಯ ಒತ್ತಡವಿರುವುದರಿಂದ ಆಡಳಿತದ ಹಿತದೃಷ್ಟಿಯಿಂದ ಕಾನೂನು ವಿಭಾಗದ ಕೇಂದ್ರೀಕೃತ ಅಧಿಕಾರವನ್ನು ವಲಯ ಮಟ್ಟದ ಅಪರ / ಜಂಟಿ ಆಯುಕ್ತರುಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ನಿಯಮ 66, 67 ಮತ್ತು 69ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಪಾಲಿಕೆಯ ಆಯುಕ್ತರು ಪಾಲಿಕೆಯ ಕಾನೂನು ವಿಭಾಗದ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಯಾವುದೇ ನಡವಳಿಕೆ ಕಡತಗಳನ್ನು ತರಿಸಿ, ಪರಿಶೀಲಿಸುವ ಮತ್ತು ಪರಿಷ್ಕರಿಸುವ ಅಧಿಕಾರವನ್ನು ಉಳಿಸಿಕೊಂಡು ದಿನಾಂಕ: 09.05.2011 ರಂದು ಹೊರಡಿಸಿದ ಕಛೇರಿ ಆದೇಶದ ದಿನಾಂಕದಿಂದ ಜಾರಿಗೆ ಬರುವಂತೆ, ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಆಡಳಿತ ಶಾಖೆಯ ವಿಷಯಗಳನ್ನು ಹೊರತುಪಡಿಸಿ, ಹಾಗೂ ವಕಾಲತ್ತುಗಳಿಗೆ ಸಹಿ ಮಾಡುವ ಅಧಿಕಾರವನ್ನು ಕೇಂದ್ರ ಕಛೇರಿಯಲ್ಲಿನ ಕಾನೂನು ಕೋಶದ ಮುಖ್ಯಸ್ಥರಲ್ಲಿ ಉಳಿಸಿ, ವಲಯ ವ್ಯಾಪ್ತಿಗೆ ಒಳಪಡುವ ಕಂದಾಯ ಇಲಾಖೆ, ಕಾಮಗಾರಿ ಇಲಾಖೆ, ಆರೋಗ್ಯ ಇಲಾಖೆ, ಜಾಹೀರಾತು ವಿಭಾಗ, ಆಸ್ತಿ ವಿಭಾಗ, ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ಅಂಕಿ ಅಂಶ ವಿಭಾಗ, ಪಶುಪಾಲನೆ ಇಲಾಖೆ, ವಿದ್ಯಾ ಇಲಾಖೆ ಹಾಗೂ ಇತರೇ ಇಲಾಖೆಗಳಿಗೆ ಸಂಬಂಧಿಸಿದಂತೆ, ವಿವಿಧ ನ್ಯಾಯಾಲಯಗಳಲ್ಲಿರುವ ಎಲ್ಲಾ ಪ್ರಕರಣಗಳ ಕಾನೂನು ವ್ಯವಹರಣೆಗಳನ್ನು ವಲಯ ವ್ಯಾಪ್ತಿಯ ಕಾನೂನು ವಿಭಾಗದ ಸಲಹೆಗಾರರ ಸಹಕಾರದೊಂದಿಗೆ ನಿರ್ವಹಿಸಲು ಅಧಿಕಾರ ನೀಡಲಾಗಿದೆ ಎಂದು ಪಾಲಿಕೆಯ ಆಯುಕ್ತರು ಆದೇಶ ಹೊರಡಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 10.05.2011**

ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರ್ ಹೋಬಳಿ, ದೊಡ್ಡಕನ್ನೇಲಿ ಗ್ರಾಮದ ಸರ್ವೇ ನಂ.109 ರಲ್ಲಿನ 18 ಎಕರೆ 14 ಗುಂಟೆ ಕೆರೆ ಪ್ರದೇಶವನ್ನು ಬೆಂಗಳೂರು ಪೂರ್ವ ತಾಲ್ಲೂಕು ತಹಶೀಲ್ದಾರ್ ರವರು ಇಲಾಖಾ ಮೋಜಣಿದಾರರಿಂದ ಅಳತೆ ಮಾಡಿಸಿ ದೃಢೀಕರಿಸಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪರಿಸರ ಕೋಶ ರವರ ಕಛೇರಿಗೆ ನಕ್ಷೆಯನ್ನು ದಿನಾಂಕ: 06.01.2011 ರಂದು ಕಳುಹಿಸಿದ್ದ ಮೇರೆಗೆ ಸದರಿ ಕೆರೆ ಪ್ರದೇಶದ ಗಡಿಯನ್ನು ಗುರ್ತಿಸಿ ಅತಿಕ್ರಮಣಗಳನ್ನು ತೆರವುಗೊಳಿಸಿ, ಚೈನ್ ಲಿಂಕ್ ತಂತಿ ಬೇಲಿ ಅಳವಡಿಸುವ ಕೆಲಸವನ್ನು ಮುಖ್ಯ ಅಭಿಯಂತರರು, ಪರಿಸರ ಕೋಶ, ಬಿ.ಬಿ.ಎಂ.ಪಿ. ವತಿಯಿಂದ ಕೈಗೊಳ್ಳಲಾಗಿರುತ್ತದೆ. ಪೂರಕವಾಗಿ ಅತಿಕ್ರಮಣಗಳನ್ನು ತೆರವುಗೊಳಿಸಲು ದಿನಾಂಕ: 05.05.2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಡೆ ಮತ್ತು ಸ್ಥಳೀಯ ಪೋಲೀಸರ ಸಹಯೋಗದೊಂದಿಗೆ ದೊಡ್ಡಕನ್ನೇಲಿ ಗ್ರಾಮದಲ್ಲಿರುವ ಸರ್ವೆ ನಂ.109 ಸರ್ಕಾರಿ ಕೆರೆಯಲ್ಲಿನ 1 ಎಕರೆ 10 ಗುಂಟೆ ಅತಿಕ್ರಮಣ ಪ್ರದೇಶವನ್ನು ಖುಲ್ಲಾಪಡಿಸಿ ಪಾಲಿಕೆ ವಶಕ್ಕೆ ಪಡೆದುಕೊಂಡು ಚೈನ್ ಲಿಂಕ್ ತಂತಿಬೇಲಿಯನ್ನು ಅಳವಡಿಸಲಾಗಿರುತ್ತದೆ.

ಸದರಿ ಕಾರ್ಯಾಚರಣೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸಹಾಯಕ ಅಭಿಯಂತರರು ಭಾಗವಹಿಸಿದ್ದು, ಸದರಿ ಕಾರ್ಯಾಚರಣೆಯನ್ನು ಮುಖ್ಯ ಅಭಿಯಂತರರು, ಪರಿಸರ ಕೋಶ, ಬಿ.ಬಿ.ಎಂ.ಪಿ. ಇವರ ಮಾರ್ಗದರ್ಶನದಲ್ಲಿ ನಡೆಸಲಾಗಿರುತ್ತದೆ ಎಂದು ಕಾರ್ಯಪಾಲಕ ಅಭಿಯಂತರರು, ಪರಿಸರ ಕೋಶ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 10.05.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಹಲವಾರು ಕಡೆ ರಾತ್ರಿ ಹೊತ್ತಿನಲ್ಲಿ ಘನ ತ್ಯಾಜ್ಯ ವಸ್ತುಗಳು, ಮಣ್ಣು, ಕಟ್ಟಡಗಳ ಅವಶೇಷಗಳು ಮತ್ತಿತರೆ ವಸ್ತುಗಳನ್ನು ವಾಹನಗಳಲ್ಲಿ ತಂದು ಮಳೆ ನೀರಿನ ಚರಂಡಿ, ಕೆರೆ ಮತ್ತು ರಸ್ತೆ ಬದಿ ಹಾಕುತ್ತಿರುವುದು ಕಂಡು ಬಂದಿದೆ. ಇದರಿಂದ ರಾಜಕಾಲುವೆಗಳು ಕಿರಿದಾಗಿ ಮತ್ತು ರಸ್ತೆ ಬದಿ ಮೋರಿಗಳು ಕಟ್ಟಿಕೊಂಡು ಮಳೆಗಾಲದಲ್ಲಿ ಪ್ರವಾಹ ಉಂಟಾಗಲು ಕಾರಣವಾಗುತ್ತಿವೆ. ಈ ಬಗ್ಗೆ ಪೋಲಿಸ ಇಲಾಖೆ ಸಹಕಾರದೊಂದಿಗೆ ಅಂತಹ ತ್ಯಾಜ್ಯವನ್ನು ತಂದು ಹಾಕುವ ವಾಹನಗಳನ್ನು ಗುರುತಿಸಿ ಅವುಗಳನ್ನು ಜಪ್ತಿ ಮಾಡಿ, ವಾಹನಗಳಿಗೆ ದಂಡ ವಿಧಿಸಲು ಪಾಲಿಕೆ ಆಯುಕ್ತರು ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಇಂದು ನಾಗಪುರ ವಾರ್ಡ್ ನಂ.67ರಲ್ಲಿ ಮಹಾಲಕ್ಷ್ಮೀ ಬಡಾವಣೆಯಲ್ಲಿರುವ ಕಮಲಮ್ಮನಗುಂಡಿ ಹತ್ತಿರ ಹೊಸದಾಗಿ ಡಾಂಬರೀಕರಣ ಮಾಡಿದ್ದ ರಸ್ತೆಯಲ್ಲಿ ಡೆಬ್ರೀಸ್‌ನ್ನು ರಾತ್ರಿ ಸಮಯದಲ್ಲಿ ಸುರಿಯುತ್ತಿದ್ದುದರ ಬಗ್ಗೆ ಉಪ ಮಹಾಪೌರರ ಗಮನಕ್ಕೆ ಬಂದಿದ್ದು, ಅಧಿಕಾರಿಗಳು ಇಂದು ವಾಹನ ಸಂಖ್ಯೆ: ಕೆ.ಎ-05-6928 ವಾಹನವನ್ನು ಪಾಲಿಕೆ ವಶಕ್ಕೆ ಪಡೆದು, ಸದರಿ ವಾಹನದ ಮಾಲೀಕರಿಗೆ ರೂ.10,000/- ದಂಡ ವಿಧಿಸಿ, ವಸೂಲು ಮಾಡಲಾಗಿದೆ ಎಂದು ಉಪ ಮಹಾಪೌರರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**